ದಿನಾಂಕ: 10-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ.ಎಸ್.ಎಸ್.ಎನ್. ಪ್ರತಿವಾದಿ 3 ರಿಂದ 5 ರವರ ಪರ ವಕೀಲರಿಂದಃ**

15. ಸರ್ವೆ ನಂ.18/5ರಲ್ಲಿ ಗೂಳಪ್ಪ, ಬಸಪ್ಪ, ಶಿವಪ್ಪ ಮತ್ತು ಕರೆಪ್ಪ ಇವರುಗಳು ಕಬ್ಜೆಯಲ್ಲಿ ಇದ್ದಾರೆ. ಸದರಿ ಸರ್ವೆ ನಂ.18/5ರಲ್ಲಿ ಈ ಮೇಲೆ ಹೇಳಿದ ನಾಲ್ಕು ಜನ ಸ್ವಾಧೀನದಲ್ಲಿ ಇದ್ದಾರೆ ಎಂದು ತೋರಿಸಲು ದಾಖಲೆಗಳನ್ನು ಹಾಜರಪಡಿಸಿದ್ದೇನೆ. ಸರ್ವೆ ನಂ.18/5ರ ಪಹಣಿ ಪತ್ರಿಕೆಯಲ್ಲಿ ಹಣಮಂತ ಮಹಾರಾಜ ಮತ್ತು ಯಲ್ಲಾಲಿಂಗ ಮಹಾರಾಜ ಇವರ ಹೆಸರುಗಳು ಇವೆ. ಸರ್ವೆ ನಂ.18/5 ರಲ್ಲಿ ಕರೆಪ್ಪ ಮತ್ತು ಬಸಪ್ಪ ಇವರುಗಳು ಮಾತ್ರ ಕಬ್ಜೆಯಲ್ಲಿ ಇದ್ದಾರೆ ಉಳಿದವರು ಕಬ್ಜೆಯಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

16. ಸರ್ವೆ ನಂ.488/3 ಮೂಲತಃ ನಬಿಸಾಬ ರಾಜೆಸಾಬ ಅನ್ಸಾರಿ ಇವರಿಗೆ ಸಂಬಂಧಪಟ್ಟ ಜಮೀನು ಎಂದರೆ ಸರಿ. ಸದರಿಯವರು ತಮ್ಮ ಮನೆತನದ ಅಡಚಣೆಗಾಗಿ ಸರ್ವೆ ನಂ.488/3 ರ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ಹಿರಿಯರಿಂದ ಬಂದ ಆಸ್ತಿಗಳ ಆದಾಯದಿಂದ ಸರ್ವೆ ನಂ.488/3 ರ ಜಮೀನನ್ನು ನನ್ನ ತಂದೆ ಹಾಗೂ ಪ್ರತಿವಾದಿ 1 ರಿಂದ 3 ರವರು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ.488/3 ರ ಆಸ್ತಿಯನ್ನು 2ನೇ ಪ್ರತಿವಾದಿಯ ಹೆಸರಿನಲ್ಲಿ ಖರೀದಿ ಮಾಡಲಾಗಿದೆ ಎಂದರೆ ಸರಿ.

17. 1989ರಲ್ಲಿ ನಮ್ಮ ತಂದೆ ಹಾಗೂ ನನ್ನ ಚಿಕ್ಕಪ್ಪಂದಿಯರು ಎಲ್ಲರೂ ಕೂಡಿಯೇ ಇದ್ದರು ಎಂದರೆ ಸರಿ. ನಮ್ಮ ತಂದೆ ಹಾಗೂ ನನ್ನ ಚಿಕ್ಕಪ್ಪಂದಿರು ಎಲ್ಲರು ಕೂಡಿ ಇದ್ದಾಗಲೇ ಸರ್ವೆ ನಂ.488/3 ರ ಜಮೀನು ಖರೀದಿ ಮಾಡಲಾಗಿದೆ ಎಂದರೆ ಸರಿ. ಸದರಿ ಜಮೀನಿನ ಖರೀದಿ ಪತ್ರದ ಆಧಾರದ ಮೇಲೆ ಡೈರಿ ನಂ.6785 ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ.

18. ಸರ್ವೆ ನಂ.488/4 ಸಹ ನಬಿಸಾಬ ರಾಜೆಸಾಬ ಅನ್ಸಾರಿ ಇವರಿಗೆ ಸಂಬಂಧಪಟ್ಟ ಜಮೀನು ಎಂದರೆ ಸರಿ. ಸದರಿ ಜಮೀನನ್ನು 1989ರಲ್ಲಿ 2ನೇ ಪ್ರತಿವಾದಿಯ ಹೆಂಡತಿಯ ಹೆಸರಿನಲ್ಲಿ ಖರೀದಿ ಮಾಡಲಾಗಿದೆ ಎಂದರೆ ಸರಿ. ಸದರಿ ಖರೀದಿ ಪತ್ರದ ಪ್ರಕಾರ ಡೈರಿ ನಂ.6784 ಮಂಜೂರಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.488/3 ಹಾಗೂ 488/4 ರ ಜಮೀನುಗಳಲ್ಲಿ ನಮಗು ಮತ್ತು ನಮ್ಮ ಚಿಕ್ಕಪ್ಪಂದಿಯರಿಗು ಹಕ್ಕು ಇರುತ್ತದೆ ಎಂದರೆ ಸರಿಯಲ್ಲ.

19. 1990ರಲ್ಲಿ ಸರ್ವೆ ನಂ.488/3 ರ ಜಮೀನನ್ನು 2ನೇ ಪ್ರತಿವಾದಿ ನಮ್ಮ ಕುಟುಂಬದ ಯಾವುದೇ ಅಡಚಣೆ ಇಲ್ಲದೇ ಇದ್ದರೂ ಸಹ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಖರೀದಿ ಪತ್ರಕ್ಕೆ ನನ್ನ ತಂದೆ ಮತ್ತು ಉಳಿದ ಚಿಕ್ಕಪ್ಪಂದಿಯರ ಸಹಿ ಪಡೆದಿಲ್ಲ ಎಂದರೆ ಸರಿ. ಸರ್ವೆ ನಂ.488/4 ರ ಜಮೀನನ್ನು ಸಹ 2002ರಲ್ಲಿ ನಮ್ಮ ಕುಟುಂಬಕ್ಕೆ ಯಾವುದೇ ಅಡಚಣೆ ಇಲ್ಲದೇ ಇದ್ದರೂ ಸಹ 2ನೇ ಪ್ರತಿವಾದಿಯ ಹೆಂಡತಿ ಮಾರಾಟ ಮಾಡಿರುತ್ತಾರೆ ಎಂದರೆ ಸರಿ.

20. 2ನೇ ಪ್ರತಿವಾದಿ ನಮ್ಮ ಹಿರಿಯರಿಂದ ಬಂದ ಆಸ್ತಿಗಳಲ್ಲಿಯೆ ಒಕ್ಕಲುತನ ಮಾಡುತ್ತಾರೆ. 2ನೇ ಪ್ರತಿವಾದಿಗೆ ಒಕ್ಕಲುತನವನ್ನು ಹೊರತುಪಡಿಸಿ ಬೇರೆ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿ. ಅದೇ ರೀತಿ 2ನೇಪ್ರತಿವಾದಿಯ ಹೆಂಡತಿ ಹಣಮವ್ವ ಇವರಿಗೆ ಒಕ್ಕಲುತನವನ್ನು ಹೊರತುಪಡಿಸಿ ಬೇರೆ ಆದಾಯ ಇರುವುದಿಲ್ಲ ಎಂದರೆ ಸರಿ. ನಮ್ಮ ಮನೆತನದ ಹಿರಿತನವನ್ನು 2ನೇ ಪ್ರತಿವಾದಿಯೇ ಮಾಡುತ್ತಿದ್ದರು ಎಂದರೆ ಸರಿಯಲ್ಲ.

21. ಈ ದಾವೆಯಲ್ಲಿ ಸರ್ವೆ ನಂ.488/3 ಮತ್ತು 488/4 ನ್ನು ಸೇರಿಸಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.488/3 ಮತ್ತು 488/4 ರ ಜಮೀನುಗಳ ಚಕ್ಕಬಂದಿ ಹೇಳಲು ಬರುವುದಿಲ್ಲ.

22. KA-24/TB-0338 ನೋಂದಣಿ ಸಂಖ್ಯೆ ಹೊಂದಿರುವ ಒಂದು ಟ್ರ್ಯಾಕ್ಟರ ಸಹ ಇದೆ ಎಂದರೆ ಸರಿ. ಸದರಿ ಟ್ರ್ಯಾಕ್ಟರನ್ನು ಈ ದಾವೆ ಮಾಡುವುದಕ್ಕಿಂತ 01 ವರ್ಷ ಮೊದಲು ಖರೀದಿ ಮಾಡಲಾಗಿದೆ. ಸದರಿ ಟ್ರ್ಯಾಕ್ಟರಗೆ ಒಂದು ಟ್ರೇಲರ್ ಇದೆ. ನನಗೆ ಟ್ರೇಲರ್ ನಂಬರ ಹೇಳಲು ಬರುವುದಿಲ್ಲ. ಟ್ರ್ಯಾಕ್ಟರ ಮತ್ತು ಟ್ರೇಲರ್ ಪ್ರತಿವಾದಿ 2 ರವರ ಹೆಸರಿನಲ್ಲಿ ಇದೆ ಎಂದರೆ ಸಾಕ್ಷಿದಾರರು 2ನೇ ಪ್ರತಿವಾದಿಯ ಮಗನ ಹೆಸರಿನಲ್ಲಿ ಇದೆ ಎಂದು ಹೇಳುತ್ತಾರೆ. 2ನೇ ಪ್ರತಿವಾದಿಯ ಮಗನ ಉದ್ಯೋಗ ಒಕ್ಕಲುತನ. ನಾನು ಈಗ ರಡೇರಟ್ಟಿ ಗ್ರಾಮದಲ್ಲಿ ವಾಸ ಇದ್ದೇನೆ. ನಾನು ರಡೇರಟ್ಟಿ ಗ್ರಾಮದಲ್ಲಿ ವಾಸ ಇದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರ ಮಾಡಿಲ್ಲ. ನನ್ನ

ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಾನು ರಡೇರಟ್ಟಿ ಗ್ರಾಮದಲ್ಲಿ ವಾಸ ಇದ್ದೇನೆ ಎಂದು ಬರೆದಿಲ್ಲ ಎಂದರೆ ಸರಿ. ಅದೇ ರೀತಿ ನನ್ನ ವಾದ ಪತ್ರದಲ್ಲಿಯೂ ಸಹ ನಾವು ರಡೇರಟ್ಟಿ ಗ್ರಾಮದಲ್ಲಿ ವಾಸ ಇದ್ದೇವೆ ಎಂದು ಬರೆದಿಲ್ಲ ಎಂದರೆ ಸರಿ.

23. ರಡೇರಟ್ಟಿ ಗ್ರಾಮದಲ್ಲಿ ನನಗೆ ಒಂದು ಮನೆ ಇದೆ. ಸದರಿ ಮನೆ ಪ್ರತಿವಾದಿ 1 ಮತ್ತು 3 ರವರ ಹೆಸರಿನಲ್ಲಿ ಇದೆ. 2ನೇ ಪ್ರತಿವಾದಿಯ ಹೆಸರಿನಲ್ಲಿ ಎರಡು ಮನೆಗಳಿವೆ ಎಂದರೆ ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿ ಶಿವಪ್ಪ ಇವರ ಹೆಸರಿನಲ್ಲಿ ಎರಡು ಮನೆಗಳು ಇರುವ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮನೆಗಳನ್ನು, ಈ ಮೇಲೆ ಹೇಳಿದ ಟ್ರ್ಯಾಕ್ಟರ ಮತ್ತು ಟ್ರೇಲರನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ. ನಮ್ಮ ಕುಟುಂಬಕ್ಕೆ ಒಂದು ಟಾಟಾ ಏಸ್ ವಾಹನ ಇದೆ ಎಂದರೆ ಸರಿ. ಸದರಿ ವಾಹನದ ನೋಂದಣಿ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿ ಟಾಟಾ ಏಸ್ ವಾಹನವನ್ನು ಸಹ ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

24. ರಡರಟ್ಟಿ ಗ್ರಾಮದಲ್ಲಿ ಜಿ.ಪಿ.ಸಿ ನಂ.70 ರಲ್ಲಿ ನಮ್ಮದು ಒಂದು ಮನೆ ಇದೆ ಎಂದರೆ ನನಗೆ ಗೊತ್ತಿಲ್ಲ. ಟಾಟಾ ಏಸ್ ವಾಹನವು 2ನೇ ಪ್ರತಿವಾದಿಯ ಮಗ ಭೀಮಶಿ ಇವರ ಹೆಸರಿನಲ್ಲಿ ಇದೆ. ಅದೇ ರೀತಿ ನಮ್ಮ ಕುಟುಂಬಕ್ಕೆ ಇರುವ 200 ಕುರಿಗಳನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸಾಕ್ಷಿದಾರರು ತಮ್ಮ ಕುಟುಂಬಕ್ಕೆ ಯಾವುದೇ ಕುರಿಗಳು ಇರುವುದಿಲ್ಲವೆಂದು ಹೇಳುತ್ತಾರೆ.

25. ಜನೇವರಿ 1990ರಲ್ಲಿ ನಮ್ಮ ತಂದೆ ಮತ್ತು ಪ್ರತಿವಾದಿ 1, 2 ಮತ್ತು 3 ರವರ ನಡುವೆ ಬಾಯಿ-ಮಾತಿನಲ್ಲಿ ವಾಟ್ನಿ ಆಗಿದೆ ಎಂದರೆ ನನಗೆ ಗೊತ್ತಿಲ್ಲ. 1990 ರಿಂದ ಇಲ್ಲೀಯವರೆಗು ನಮ್ಮ ಕುಟುಂಬದ ಎಲ್ಲರೂ ಬೇರೆ ಬೇರೆ ಇರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಕುಟುಬಂದವರು ಎಲ್ಲರು ಕೂಡಿಯೇ ಇದ್ದೇವೆ ಎಂದು ತೋರಿಸಲು ಬೇರೆ ಬೇರೆ ಪಡಿತರ ಚೀಟಿಗಳು ಇವೆ.

26. ನಮ್ಮ ತಂದೆ ಹಾಗೂ ನಮ್ಮ ಚಿಕ್ಕಪ್ಪಂದಿಯರ ನಡುವೆ ಪಾಲು ಆದ ನಂತರ 1996ರಲ್ಲಿ ಸರ್ವೆ ನಂ.56/1ಅ/1+1/ಅ/2 ರಲ್ಲಿಯ ಅರ್ಧ ಪಾಲನ್ನು ನನ್ನ ತಂದೆ ಮತ್ತು 2ನೇ ಪ್ರತಿವಾದಿ ಸೇರಿ ಪ್ರತಿವಾದಿ 1 ಹಾಗೂ 3 ಇವರಿಗೆ ಬಿಟ್ಟು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-15ನ್ನು ನಾನೇ ಹಾಜರ ಮಾಡಿರುತ್ತೇನೆ ಎಂದರೆ ಸರಿ. ನಿಪಿ-15ರ ಪ್ರಕಾರ ಸರ್ವೆ ನಂ.56 ರ ಜಮೀನಿಗೆ ಪ್ರತಿವಾದಿ 1 ಹಾಗೂ 3 ರವರ ಹೆಸರುಗಳು ದಾಖಲಾಗಿವೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ 1 ಮತ್ತು 3 ರವರ ಹೆಸರು ದಾಖಲಾಗಿದ್ದನ್ನು ಪ್ರಶ್ನಿಸಿ ನಾವು ಸಹಾಯ ಆಯುಕ್ತರ ಕಚೇರಿಯಲ್ಲಿ ಯಾವುದೇ ಅಪೀಲು ಸಲ್ಲಿಸಿಲ್ಲ.

27. 1996 ರಿಂದ ಇಲ್ಲೀಯವರೆಗು ನಾವು ಯಾವತ್ತೂ ರಡೇರಟ್ಟಿ ಗ್ರಾಮದಲ್ಲಿ ವಾಸ ಇಲ್ಲ ಮುಧೋಳದಲ್ಲಿಯೆ ವಾಸ ಇದ್ದೇವೆ ಎಂದರೆ ಸರಿಯಲ್ಲ. 1990 ರಿಂದ ಇಲ್ಲೀಯವರೆಗು ತಾವಾಗಲಿ, ತಮ್ಮ ತಂದೆ ತಾಯಿಯಾಗಲಿ ತಮ್ಮ ಸಹೋದರರಾಗಲಿ ರಡೇರಟ್ಟಿ ಗ್ರಾಮದಲ್ಲಿ ಮತದಾನ ಮಾಡಿದ ಬಗ್ಗೆ ನನ್ನ ಬಳಿ ದಾಖಲೆಗಳು ಇರುವುದಿಲ್ಲ. ರಡೇರಟ್ಟಿ ಗ್ರಾಮದ ಪತದಾರರ ಪಟ್ಟಿಯಲ್ಲಿ ನನ್ನ,

ನನ್ನ ತಂದೆ, ತಾಯಿ, ಸಹೋದರ ಸಹೋದರಿಯರ ಹೆಸರು ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿದಾರರು ತಮ್ಮ ತಾಯಿಯ ಹೆಸರು ಇದೆ ಎಂದು ಹೇಳುತ್ತಾರೆ.

28. ದಿಃ10/04/1997 ರಂದು ನನ್ನ ತಂದೆ ಸರ್ವೆ ನಂ.17/1ಎ ಜಮೀನಿಗೆ ಒಂದು ಖರೀದಿ ಕರಾರು ಪತ್ರ ಬರೆದು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ತಂದೆಗೆ ಸರ್ವೆ ನಂ.17/1ಎ ನಲ್ಲಿ ¼ ಹಿಸ್ಸೆ ಬಂದಿದ್ದು ಆ ಜಮೀನನ್ನು 3ನೇ ಪ್ರತಿವಾದಿಗೆ ಖರೀದಿ ಕರಾರು ಪತ್ರ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಆ ಹೊತ್ತಿನಿಂದ ಈ ಹೊತ್ತಿನವರೆಗು 3ನೇ ಪ್ರತಿವಾದಿ ದಾವಾ ಆಸ್ತಿಗಳನ್ನು ತಮ್ಮ ಬಳಿಗೆ ಇಟ್ಟುಕೊಂಡಿದ್ದರಿಂದ ಅವರೇ ಸದರಿ ಜಮೀನನ್ನು ಸಾಗುವಳಿ ಮಾಡುತ್ತಾರೆ ಎಂದರೆ ಸರಿಯಲ್ಲ.

29. ಕರೆಪ್ಪ ಇವರ ಮಕ್ಕಳು ಸದರಿ ಆಸ್ತಿಗೆ ಒಂದು ಹಕ್ಕು ಬಿಟ್ಟು ಕೊಟ್ಟ ಪತ್ರವನ್ನು ಮಾಡಿ ಸದರಿ ಆಸ್ತಿಯನ್ನು ಪ್ರತಿವಾದಿ 4 ಮತ್ತು 5 ರವರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಹಕ್ಕು ಬಿಟ್ಟು ಕೊಟ್ಟ ಪತ್ರದ ಆಧಾರದ ಮೇಲೆ ಎಂ.ಆರ್.ನಂ.197/2006-07 ದಿನಾಂಕ 17/01/2007 ರಂದು ಮಂಜೂರು ಆಗಿದೆ ಎಂದರೆ ಸರಿ. ನಂತರ ಪ್ರತಿವಾದಿ 3 ಹಾಗೂ ಅವರ ಮಕ್ಕಳು ಸದರಿ ಜಮೀನುಗಳ ಮೇಲೆ ಬ್ಯಾಂಕನಲ್ಲಿ ಸಾಲವನ್ನು ಸಹ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನಾಗಲಿ ನನ್ನ ಕುಟುಂಬದವರಾಗಲಿ ಎಂ.ಆರ್.ನಂ.197/2006-07 ಹಾಗೂ ಎಂ.ಇ.ನಂ.9149 ನ್ನು ಈವರೆಗೂ ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿದಾರರು ಈ ದಾವೆಯಲ್ಲಿ ಪ್ರಶ್ನಿಸಿದ್ದೇವೆ, ಈ

ದಾವೆಯನ್ನು ಹೊರತುಪಡಿಸಿ ಬೇರೆ ಎಲ್ಲಿಯೂ ಪ್ರಶ್ನಿಸಿಲ್ಲ ಎಂದು ಹೇಳುತ್ತಾರೆ. ಎಂ.ಇ.ನಂ.9149 ತಪ್ಪು ಇದೆ ಎಂದು ಹೇಳಿ ನಾವು ಎಲ್ಲಿಯೂ ಪ್ರಶ್ನಿಸಿಲ್ಲ ಎಂದರೆ ಸರಿ.

30. ನಮ್ಮ ತಂದೆಯ ಜೀವಿತ ಕಾಲದಲ್ಲಿಯೇ ಓ.ಎಸ್.ನಂ.570/2008ರಲ್ಲಿ ಒಂದು ದಾವ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. 3ನೇ ಪ್ರತಿವಾದಿ ತಮ್ಮ ಲಿಖಿತ ಹೇಳಿಕೆಯಲ್ಲಿ ಏನು ಹೇಳಿದ್ದಾರೆಂದು ನಾನು 3ನೇ ಪ್ರತಿವಾದಿ ಸಲ್ಲಿಸಿದ ಲಿಖಿತ ಹೇಳಿಕೆಯನ್ನು ಓದಿ ತಿಳಿದುಕೊಂಡಿಲ್ಲ. ಓ.ಎಸ್.ನಂ.570/2008ನ್ನು ನನ್ನ ತಂದೆ ಸರ್ವೆ ನಂ.17/1 ರ ಮೇಲೆ ಮಾತ್ರ ಮಾಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ದಾವೆಯಲ್ಲಿ ನಮ್ಮ ಚಿಕ್ಕಪ್ಪಂದಿಯರು ಎಲ್ಲರೂ ಹಾಜರಾಗಿ ತಮ್ಮ ತಕರಾರನ್ನು ಸಹ ಕೊಟ್ಟಿದ್ದರು ಎಂದರೆ ನನಗೆ ಗೊತ್ತಿಲ್ಲ. ಓ.ಎಸ್.ನಂ.570/2008 ದಿಃ 08/08/2012 ರಂದು ದಾವೆ ನಡೆಸದೇ ಇದ್ದ ಕಾರಣಕ್ಕೆ ವಜಾ ಆಗಿದೆ ಎಂದರೆ ಸರಿ. ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ನನಗೆ ಓ.ಎಸ್.ನಂ.570/2008ರ ಬಗ್ಗೆ ಎಲ್ಲ ಮಾಹಿತಿ ಇದ್ದರೂ ಸಹ ಈ ಸುಳ್ಳುದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

31. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲ ವಿಷಯಗಳು ಸುಳ್ಳು ಇರುತ್ತವೆ ಎಂದರೆ ಸರಿಯಲ್ಲ. ಈ ದಾವೆ ಹೂಡಿದಾಗಿನಿಂದ ನಾವೆಲ್ಲರು ಬೇರೆ ಆಗಿದ ಬಗ್ಗೆ ಹಾಗೂ ನಾವು ಮತ್ತು ನಮ್ಮ ಚಿಕ್ಕಪ್ಪಂದಿಯರು

ಬೇರೆ ಬೇರೆ ಇರುವ ವಿಷಯ ಗೊತ್ತಿದ್ದರೂ ಸಹ ಎಲ್ಲರೂ ಕೂಡಿ ಇದ್ದೇವೆ ಎಂದು ಹೇಳಿ ಈ ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ. ನಾನು ಹಾಜರಪಡಿಸಿದ ಡೈರಿಗಳ ಪ್ರಕಾರ ಪಾಲು ಮಾಡಿಕೊಂಡ ಆಧಾರದ ಮೇಲೆ ಎಲ್ಲರು ತಮ್ಮ ತಮ್ಮ ಪಾಲಿಗೆ ಬಂದ ಆಸ್ತಿಗಳಿಗೆ ತಮ್ಮ ಹೆಸರುಗಳನ್ನು ಹಚ್ಚಿಕೊಂಡು ಪ್ರತ್ಯೇಕವಾಗಿ ಇರುವ ವಿಷಯ ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ.

32. ನಾನು ಹಾಜರಪಡಿಸಿರುವ ನಿಪಿ-1ರ ಪ್ರಕಾರ ನನ್ನ ತಂದೆ ಹಾಗೂ ಅವರ ಸಹೋದರರ ಹೆಸರುಗಳು ತಮ್ಮ ತಮ್ಮ ಪಾಲಿಗೆ ಬಂದ ಜಮೀನಿಗೆ ದಾಖಲಿಸಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆಯಲ್ಲಿ ಶ್ರೀಶೈಲ ಮಹಾದೇವಪ್ಪ ಲಗಳಿ ಮತ್ತು ಗೌರವ್ವ ಮಹಾದೇವಪ್ಪ ಲಗಳಿ ಇವರನ್ನು ಸೇರಿಸಿಲ್ಲ ಎಂದರೆ ಸರಿ. ಈಗಾಗಲೇ ದಾವಾ ಆಸ್ತಿಗಳಲ್ಲಿ ಪಾಲು ಆಗಿರುವ ವಿಷಯ ನನಗೆ ಗೊತ್ತಿದ್ದರೂ ಸಹ ಈವರೆಗು ಪಾಲು ಆಗಿಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ ಶ್ರೀ. ಆರ್.ಎಮ್.ಬಿ. 1ನೇ ಪ್ರತಿವಾದಿ ಪರ ವಕೀಲರಿಂದಃ</u>**

ಪ್ರತಿವಾದಿ 1 ಹಾಗೂ ಅವರ ವಕೀಲರು ಗೈರು ಹಾಜರಿ, ಆದ್ದರಿಂದ ಪಾಟೀಸವಾಲು ಮುಂದೂಡಲಾಯಿತು.

**ಪಾಟೀಸವಾಲುಃ ಶ್ರೀ.ಎಮ್.ವಾಯ್.ಜೆ. 2ನೇ ಪ್ರತಿವಾದಿ ಪರ ವಕೀಲರಿಂದಃ**

ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)
ಓ ಹೇ ಕೇ ಸರಿ ಇದೆ.

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ